(ಗೊಂದಲ)

ಉಪಾಧ್ಯಕ್ಷರು:– ಒಂದು ಪ್ರಕಟಣೆ, ಸಹಕಾರ ಮಂತ್ರಿಗಳಾದ ಶ್ರೀ ಆರ್. ವಿ. ದೇಶಪಾಂಡೆ ಒಂದೂವರೆಗಂಟೆಗೆ ಕೆಳಗಡೆ ಊಟಕ್ಕೆ ಕರೆದಿದ್ದಾರೆ, ದಯವಿಟ್ಟು ಎಲ್ಲರೂ ಊಟಕ್ಕೆ ಬರಬೇಕೆಂದು ಅವರು ವಿನಂತಿಸಿಕೊಂಡಿದ್ದಾರೆ, ಈಗ ಸದನವನ್ನು ಮಧ್ಯಾಹ್ನ 3.00 ಗಂಟೆಯವರೆಗೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1. ಗಂಟೆ 43 ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸದನವು ಪುನಃ 03.51ಕ್ಕೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

7. ನಿರ್ಣಯ

ಹುತಾತ್ಮರ ಸ್ಮರಣೆ

ಅಧ್ಯಕ್ಷರು:– ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ತ್ಯಾಗ ಮಾಡಿದ ಸ್ವಾತಂತ್ರ್ಯ ಹೋರಾಟಗಾರರಾದ ಹುತಾತ್ಮ ಭಗತ್ ಸಿಂಗ್, ರಾಜಗುರು ಮತ್ತು ಸುಖದೇವ್ ಇವರುಗಳನ್ನು ಇದೇ ದಿನಾಂಕದಂದು ಬ್ರಿಟಿಷ್ ಆಡಳಿತದಲ್ಲಿ ಲಾಹೋರ್‌ನ ಸೆರೆಮನೆಯಲ್ಲಿ ಮರಣ ದಂಡನೆಗೆ ಗುರಿಪಡಿಸಿದ್ದರು. ಅವರುಗಳ ಜೀವ ತ್ಯಾಗದ ನೆನಪಿಗಾಗಿ ಈ ಸದನ ಅವರುಗಳನ್ನು ಸ್ಮರಣೆ ಮಾಡುತ್ತದೆಂದು ಸದನವು ಸರ್ವಾನುಮತದಿಂದ ನಿರ್ಣಯಿಸುತ್ತದೆ.

ಅವರ ನೆನಪಿಗಾಗಿ ಸದನವು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

8. ಅರ್ಧಗಂಟೆ ಕಾಲಾವಧಿ ಚರ್ಚೆ

ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಡೆದ ಚರ್ಚೆಗೆ ಸರ್ಕಾರದ ಉತ್ತರ

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು):– ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಹಿರಿಯ ಮುಖಂಡರುಗಳು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅವರ ಭಾವನೆಗಳನ್ನು ವ್ಯಕ್ತ ಮಾಡಿದ್ದಾರೆ. ಬಹಳ ಮುಖ್ಯವಾಗಿ, 2–3 ವಿಚಾರಗಳನ್ನು ಎಲ್ಲಾ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ಟಾಸ್ಕ್ ಫೋರ್ಸ್ ಏನು ನೀವು ರಚನೆ ಮಾಡಿದ್ದೀರಿ, ಆ ಟಾಸ್ಕ್ ಫೋರ್ಸ್ ಎಲ್ಲಿ ಕುಡಿಯುವ ನೀರಿನ ಅಗತ್ಯ ಇದೆ. ತ್ವರಿತವಾಗಿ ಕುಡಿಯುವ ನೀರನ್ನು ಕೊಡಲೇಬೇಕಾದಂತಹ ಪರಿಸ್ಥಿತಿಗಳು ಎಲ್ಲೆಲ್ಲಿ ಇವೆ, ಅಲ್ಲಿ ಹೊಸ ಬೋರ್‌ವೆಲ್ ಕೊಡಬೇಕಾದರೆ, ಮತ್ತೆ ಬೇರೆ ರೂಪದಲ್ಲಿ ನೀರು ಒದಗಿಸಬೇಕಾದಂತಹ ಪರಿಸ್ಥಿತಿ ಬಂದರೆ, ತುರ್ತು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ, ಅದಕ್ಕೆ ಹಣ ಸಾಲುವುದಿಲ್ಲ ಎನ್ನತಕ್ಕಂಥ ಮಾತನ್ನು ಎಲ್ಲರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ರೂರಲ್ ಡೆವಲಪ್‌ಮೆಂಟ್ ಇಲಾಖೆಯವರಿಗೆ ಹೇಳಿದ್ದೇನೆ, ಕುಡಿಯುವ ನೀರಿಗೆ ಯಾವುದೇ

ಕಾರಣಕ್ಕೂ ಕೂಡ ತೊಂದರೆಯಾಗದ ರೀತಿಯಲ್ಲಿ ನಾವು ನೋಡಿಕೊಳ್ಳುತ್ತೇವೆ. ಏಕೆಂದರೆ ಸರ್ಕಾರ ಕುಡಿಯುವ ನೀರು ಕೊಡಲೇಬೇಕು, ಎಷ್ಟೇ ತೊಂದರೆಯಾದರೂ ಕೂಡ, ಎಷ್ಟೇ ಶ್ರಮವಾದರೂ ಕೂಡ, ಅದಕ್ಕೆ ನೀರು ಸಿಗದಿದ್ದರೂ ಸಹ, ಎಲ್ಲಿಂದಲಾದರೂ ನೀರನ್ನು ತಂದು ಕೊಡಬೇಕಾಗುತ್ತದೆ. ಅದು ಸರ್ಕಾರದ ಜವಾಬ್ದಾರಿ ಕೂಡ ಆಗಿದೆ. ಆ ಕಾರಣದಿಂದ ನಾನು ಅಗತ್ಯ ಬಿದ್ದಾಗಲೆಲ್ಲಾ ನಾನು ಎಷ್ಟು ದುಡ್ಡು ಬೇಕಾಗುತ್ತದೋ, ಅಷ್ಟು ದುಡ್ಡನ್ನೂ ಕೂಡ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಸರ್ಕಾರ ಅದಕ್ಕೆ ಬದ್ಧವಾಗಿರುತ್ತದೆ. ಆರ್ಥಿಕ ಇಲಾಖೆ ಕೂಡ, ಯಾವ್ಯಾವಾಗ ಎಷ್ಟೆಷ್ಟು ದುಡ್ಡು ಬೇಕು ಎಂದು ರೂರಲ್ ಡೆವಲಪ್‌ಮೆಂಟ್‌ನವರು ಕೇಳುತ್ತಾರೋ, ಅಷ್ಟು ದುಡ್ಡನ್ನು ಕೊಡಲಿಕ್ಕೆ ನಾವು ಬದ್ಧವಾಗಿದ್ದೇವೆ. ಎರಡನೆಯದಾಗಿ, ಈ ಮಿನಿವಾಟರ್ ಸಪ್ಲೈ ಮತ್ತು ಪೈಪ್ಡ್ ವಾಟರ್ ಸಪ್ಲೈ ಮಾಡಬೇಕಾದರೆ, ಅದಕ್ಕೆ ವಿದ್ಯುತ್ ತೆಗೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಗರಿಷ್ಠ ಪ್ರಮಾಣದಲ್ಲಿ 50 ಸಾವಿರ ರೂಪಾಯಿಗಳನ್ನು ಮಿನಿ ವಾಟರ್ ಸಪ್ಲೈಗೆ ಕೊಡಬೇಕು. ರೂರಲ್ ವಾಟರ್ ಸಪ್ಲೈ ಮತ್ತು ಪೈಪ್ ವಾಟರ್ ಸಪ್ಲೈಗೆ 1 ಲಕ್ಷ ಗರಿಷ್ಠ ಪ್ರಮಾಣದಲ್ಲಿ ಕೊಡಬೇಕು ಎನ್ನತಕ್ಕಂಥದ್ದು ಇದೆ. ಅದನ್ನು ರೂರಲ್ ಡೆವಲಪ್ ಮೆಂಟಿನವರು KPTCL ಗೆ ಕಟ್ಟಿ ಕೊಡಬೇಕಾಗುತ್ತದೆ. ಅದನ್ನು ಕಟ್ಟಿದ ಮೇಲೆ ಅವರು ಪವರ್ ಅನ್ನು ಕೊಡತಕ್ಕಂಥ ಪದ್ಧತಿ ನಡೆದುಕೊಂಡು ಬರುತ್ತಾ ಇದೆ. ನಾನು KPTCL ನವರ ಜೊತೆಗೆ ಮಾತನಾಡಿದ್ದೇನೆ. ಅವರೂ ಸಹ ಒಪ್ಪಿಕೊಂಡಿದ್ದಾರೆ. ಟಾಸ್ಕ್ ಫೋರ್ಸ್‌ನವರು immediate ಆಗಿ, ತುರ್ತಾಗಿ, ನೀರು ಕೊಡಬೇಕು, ಪವರ್ ಕೊಡಬೇಕು ಎಂದು ಹೇಳಿದಾಗ, ಅದಕ್ಕೆ ನಮಗೆ deposit ಕೊಡಿ, ಆಮೇಲೆ ಪವರ್ ಕೊಡುತ್ತೇವೆ ಅನ್ನತಕ್ಕಂಥ ಯಾವುದೇವಾದ ಹೂಡುವುದು ಬೇಡ, ಅದನ್ನು ಮಾಡತಕ್ಕಂಥ ಅಗತ್ಯ ಇಲ್ಲ, ಪವರ್ ಕೊಟ್ಟು ಬಿಟ್ಟು, ಆಮೇಲೆ ರೂರಲ್ ಡೆವಲಪ್‌ಮೆಂಟಿನಿಂದ ಅವರಿಗೇನು ಬರಬೇಕೋ, ಆ ದುಡ್ಡನ್ನು ವಸೂಲು ಮಾಡಿಕೊಳ್ಳಿ ಎನ್ನತಕ್ಕಂಥದ್ದನ್ನು ಅವರಿಗೆ ಸೂಚನೆ ಕೊಟ್ಟಿದ್ದೇವೆ. ಆ ಸೂಚನೆಗೆ ಅವರು ಒಪ್ಪಿಕೊಂಡಿದ್ದಾರೆ. ಹೀಗೆ ಎಲ್ಲೆಲ್ಲಿ ತುರ್ತಾಗಿ ನೀರು ಕೊಡಬೇಕಾಗುತ್ತದೆ, ತುರ್ತಾಗಿ ಪವರ್ ಕೊಡಬೇಕಾಗುತ್ತದೆ, ಅಂತಹ ಸ್ಥಳಗಳಲ್ಲಿ ಇದನ್ನು ಮಾಡಲಿಕ್ಕೆ ಸರ್ಕಾರ ಅವರಿಗೆ ಸೂಚನೆ ಕೊಟ್ಟಿದೆ. ರೂರಲ್ ಡೆವಲಪ್‌ಮೆಂಟಿನವರು ಆ ಹಣವನ್ನು KPTCL ನವರಿಗೆ ಕೊಡುತ್ತಾರೆ. ಅದೂ ಕೂಡ ತೀರ್ಮಾನವಾಗಿದೆ. ಮೂರನೆಯದಾಗಿ, ಎಲ್ಲಾ ಮಾನ್ಯ ಸದಸ್ಯರು ಒಂದು ವಿಚಾರ ಹೇಳಿದರು. ಶಾಸಕರು ಅಲ್ಲಿ ಅಧ್ಯಕ್ಷರಾಗಿರಬೇಕು ಮತ್ತು ಅವರಿಗೆ ಯಾವುದೇ ಅಡಚಣೆಗಳು ಆಗದ ರೀತಿಯಲ್ಲಿ ತೀರ್ಮಾನಗಳು ತೆಗೆದುಕೊಳ್ಳಲಿಕ್ಕೆ ಅವಕಾಶ ಇರಬೇಕು ಎಂಬ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಟಾಸ್ಕ್ ಫೋರ್ಸ್‌ನ ಅಧ್ಯಕ್ಷರಾಗಿ ಅಲ್ಲಿ ಆ ತಾಲ್ಲೂಕಿನ ಬಹುತೇಕ ಭಾಗವನ್ನು ಪ್ರತಿನಿಧಿಸತಕ್ಕಂಥವರು ಅಧ್ಯಕ್ಷರಾಗಿರುತ್ತಾರೆ. ಆ ತಾಲ್ಲೂಕಿನ ಯಾವುದಾದರೂ ಸ್ವಲ್ಪ ಭಾಗವನ್ನು ಪ್ರತಿನಿಧಿಸತಕ್ಕಂಥ ಶಾಸಕರೂ ಕೂಡ ಅಲ್ಲಿ ಸದಸ್ಯರಾಗಿರುತ್ತಾರೆ. ಅಲ್ಲಿ resident MLC ಗಳು ಯಾರಿರುತ್ತಾರೋ, ಅವರುಗಳೂ ಕೂಡ ಆ ಸಮಿತಿಯ ಸದಸ್ಯರಾಗಿರುತ್ತಾರೆ. ತಾಲ್ಲೂಕು

ಪಂಚಾಯಿತಿಯ ಅಧ್ಯಕ್ಷ ಅವರೂ ಕೂಡ ಅದರ ಸದಸ್ಯರಾಗಿರುತ್ತಾರೆ. ಉಳಿದಂತೆ ಅಧಿಕಾರಿಗಳೂ ಕೂಡ ಆ ಸಮಿತಿಯಲ್ಲಿರುತ್ತಾರೆ. ಕುಡಿಯುವ ನೀರನ್ನು ಕೊಡಬೇಕಾದರೆ ಬೇಕಾದಂತಹ ಇ. ಓ. Assistant Executive Engineers ಇತ್ಯಾದಿ ಈ ತರಹದ ಅಧಿಕಾರಿಗಳು ಯಾರಿರುತ್ತಾರೋ, ಆ ಅಧಿಕಾರಿಗಳೂ ಕೂಡ ಅದರಲ್ಲಿ ಇರುತ್ತಾರೆ. ಈ ರೀತಿ ಸಮಿತಿ ಇರುತ್ತದೆ. ಎಲ್ಲಿಯವರೆಗೆ ಕುಡಿಯುವ ನೀರಿನ Scarcity ಇದೆ ಅಲ್ಲಿಯವರೆಗೆ ಅಥವಾ Scarcity ಇರುವವರೆಗೆ ಸರ್ಕಾರ ಈ ತರಹದ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಹೋಗತಕ್ಕಂಥ ಕೆಲಸ ಮಾಡುತ್ತದೆ. ಮಳೆ ಬಂದಾಗ, ಕುಡಿಯುವ ನೀರಿನ ಸಮಸ್ಯೆ ಇಲ್ಲದಿದ್ದಾಗ ಈ ಪರಿಸ್ಥಿತಿ ಉದ್ಭವವಾಗುವುದೇ ಇಲ್ಲ. ಶಾಸಕರು ಟಾಸ್ಕ್ ಫೋರ್ಸ್‌ನಲ್ಲಿ ಇರಬೇಕು. ರೆಗ್ಯೂಲರ್ ಪ್ರೋಗ್ರಾಮ್ಸ್‌ಗಳಿಗೆಲ್ಲಾ ತಾಲ್ಲೂಕು ಪಂಚಾಯಿತಿಯವರು ಇರುತ್ತಾರೆ, ಜಿಲ್ಲಾ ಪಂಚಾಯಿತಿಯವರು ಇರುತ್ತಾರೆ, ಅವರು ಅದನ್ನು ನೋಡಿಕೊಳ್ಳುತ್ತಾರೆ. ರೆಗ್ಯೂಲರ್ ಪ್ರೋಗ್ರಾಮ್ಸ್‌ಗೆ ಯಾವುದೇ ಹಣದ ಕೊರತೆ ಇಲ್ಲ. ಈಗಾಗಲೇ ಸುಮಾರು 150 ಕೋಟಿ ರೂಪಾಯಿಗಳಷ್ಟು ಹಣವನ್ನು ಜಿಲ್ಲಾ ಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಮತ್ತು ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಿದ್ದೇವೆ. ಈ ವರ್ಷಕ್ಕೆ ಯಾವುದೇ on going projects ಅಥವಾ ಕಾರ್ಯಕ್ರಮಗಳಿಗೆ ಯಾವ ವಿಧವಾದಂತಹ ಹಣದ ಕೊರತೆ ಇಲ್ಲ. ಹಣದ ಕೊರತೆಯಿಂದಾಗಿ ನೀರನ್ನು ಒದಗಿಸಲು ತೊಂದರೆಯಾಗಿದೆ ಎನ್ನತಕ್ಕಂಥದ್ದೂ ಕೂಡ ಇಲ್ಲ ಎಲ್ಲೆಲ್ಲಿ ತುರ್ತಾಗಿ ಹಣವನ್ನು ಒದಗಿಸಿ ಕೊಡಬೇಕಾಗುತ್ತದೋ, ಅದನ್ನೆಲ್ಲಾ ನಾವು ಒದಗಿಸಿಕೊಡುತ್ತೇವೆ. ತುರ್ತಾಗಿ ನೀರು ಬೇಕಾಗುವ ಕಡೆಗೆ ಹಣ ಕೊಡುತ್ತೇವೆ. ಶಾಸಕರು ಎಲ್ಲಿ ನೀರು ಕೊಡಲಿಕ್ಕೆ Suggest ಮಾಡುತ್ತಾರೋ, ಎಲ್ಲಿ ಅವರು ಆಗಲೇಬೇಕು ಎಂದು ತೀರ್ಮಾನ ಮಾಡುತ್ತಾರೋ, ಆ ಕೆಲಸ ಸರ್ಕಾರ ಮಾಡುತ್ತದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುತ್ತೇನೆ. ಬಹುಶಃ ಅವರು ಪ್ರಸ್ತಾಪಿಸಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೂ ಕೂಡ ಸಮಂಜಸವಾದಂತಹ, ತೃಪ್ತಿಕರವಾದಂತಹ, ಸಮಾಧಾನಕರವಾದಂತಹ ಉತ್ತರ ನೀಡಿದ್ದೇನೆ ಎಂದು ನಾನು ಭಾವಿಸಿಕೊಂಡಿದ್ದೇನೆ.

9. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಮತಿಗೆಟ್ಟ ಆಸ್ಪತ್ರೆ ಬಗ್ಗೆ.

ಶ್ರೀ ಜೆ. ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಆರೋಗ್ಯ ಸಚಿವರು ಮತಿಗೆಟ್ಟ ಆಸ್ಪತ್ರೆ ಬಗ್ಗೆ ಒಂದು ಹೇಳಿಕೆ ಮಾಡಬೇಕಾಗಿದೆ.

ಅಧ್ಯಕ್ಷರು:– ಫರ್ಡ್ದು ನಾಳೆ ತೆಗೆದುಕೊಳ್ಳೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ:– ತಾವು ಏನು ರಿಪ್ಲೈ ಮಾಡುತ್ತೀರಿ ಅದರ ಕಾಪಿಗಳು ಬಂದಿಲ್ಲ.